305 (816) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಳಂದೂರು ಹಾಗೂ ಕೊಳ್ಳೇಗಾಲ ಪಟ್ಟಣಗಳಿಗೆ ಎರಡು ಕ್ರೀಡಾಂಗಣಗಳನ್ನು ಮಂಜೂರು ಮಾಡುವಂತೆ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಇದು ಈಗ ಯಾವ ಹಂತದಲ್ಲಿದೆ,

ಇ) ಈ ಸಾಲಿನಲ್ಲಿ ಪ್ರರಂಭಿಸಲಾಗುವುದೇ?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು)

ಅ) ಬಂದಿದೆ

ಆ) ಯಳಂದೂರಿನಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಸೂಕ್ತ ಜಮೀನು ಇನ್ನು ಲಭ್ಯವಾಗಿಲ್ಲ ಸೂಕ್ತ ಜಮೀನುಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಕೊಳ್ಳೇಗಾಲದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಶ್ರೀ ಮಹದೇಶ್ವರ ಕಾಲೇಜು ಕೊಳ್ಳೇಗಾಲ ಇವರಿಂದ 8 ಎಕರೆ ಜಮೀನನ್ನು ಇಲಾಖೆಗೆ ವರ್ಗಾಯಿಸಿಕೊಳ್ಳಗಿದೆ ಕ್ರೀಡಾಂಗಣ ನಿರ್ಮಾಣಕ್ಕಾಗಿ ಅಂದಾಜುಪಟ್ಟಿಯನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಇ) ಇಲ್ಲ 2007–08ನೇ ಸಾಲಿನ ಎರಡನೇ ಹಂತದಲ್ಲಿ ಕೊಳ್ಳೇಗಾಲದಲ್ಲಿ ಮತ್ತು 2009–10ನೇ ಸಾಲಿನ 4ನೇ ಹಂತದಲ್ಲಿ ಯಳಂದೂರಿನಲ್ಲೂ, 12ನೇ ಹಣಕಾಸು ಆಯೋಗದ ಯೋಜನೆಯಡಿ ಪ್ರಾರಂಭಿಸಲು ಉದ್ದೇಶಿಸಿದೆ

306 (817) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರದ ಬಿಳಿಗಿರಿರಂಗನ ಬೆಟ್ಟ ಕೊಳ್ಳೇಗಾಲ ಪಟ್ಟಣ ಹಾಗೂ ಯಳಂದೂರು ಪಟ್ಟಣ ಈ ಮೂರು ಕಡೆಗೆ ಬಸ್

ನಿಲ್ದಾಣಗಳನ್ನು ನಿರ್ಮಿಸುವ ಅಗತ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು,

ಇ) ಈ ಸಾಲಿನಲ್ಲಾದರೂ ಬಸ್ ನಿಲ್ದಾಣವನ್ನು ಮಂಜೂರು ಮಾಡಲಾಗುವುದೇ?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು)

ಅ) ಬಂದಿದೆ

ಆ) ಬಿಳಿಗಿರಿರಂಗನಬೆಟ್ಟ ಯಳಂದೂರು ಮತ್ತು ಕೊಳ್ಳೇಗಾಲದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ನಿವೇಶನಕ್ಕಾಗಿ ಪರಿಶೀಲನೆ ನಡೆಸಲಾಗುತ್ತಿದೆ

ಇ) ಪ್ರಸಕ್ತ ಸಾಲಿನಲ್ಲಿ ನಿವೇಶನ ದೊರೆತಲ್ಲಿ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು

307 (639) ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ (ಕೊಪ್ಪಳ) ಮತ್ತು ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಜಿಲ್ಲಾ ಪ್ರಮುಖ ರಸ್ತೆಗಳ ಸಂಖ್ಯೆ ಎಷ್ಟು ಹಾಗೂ ಎಷ್ಟು ಕಿ ಮೀ ಇರುತ್ತದೆ,

ಆ) ಪ್ರತಿ ಲೋಕೋಪಯೋಗಿ ಇಲಾಖಾ ವಿಭಾಗ ಹಾಗೂ ಉಪ ವಿಭಾಗಗಳ ವ್ಯಾಪ್ತಿಯಲ್ಲಿ ಯಾವ ಯಾವ ಜಿಲ್ಲಾ ಪ್ರಮುಖ ರಸ್ತೆಗಳು ಎಷ್ಟೆಷ್ಟು ಕಿ ಮೀ ಇರುತ್ತವೆ,

ಇ) ಇವುಗಳ ಪೈಕಿ ಯಾವ ಯಾವ ವಿಭಾಗ/ಉಪ ವಿಭಾಗದ ಎಷ್ಟೆಷ್ಟು ಕಿ ಮೀ ರಸ್ತೆಯನ್ನು ಡಾಂಬರೀಕರಣ/ಮೆಟಲಿಂಗ್/ಸರ್ವಕಾಲಿಕ ರಸ್ತೆಯಾಗಿ ಅಭಿವೃದ್ಧಿಪಡಿಸಲಾಗಿದೆ,

ಈ) ಅಭಿವೃದ್ದಿಪಡಿಸಲಾಗದೆ ಇರುವ ರಸ್ತೆಗಳಿಗೆ ಡಾಂಬರೀಕರಣ /ಮೆಟಲಿಂಗ್ ಹಾಗೂ ಸರ್ವಕಾಲಿಕ ರಸ್ತೆಯನ್ನಾಗಿ ಪರಿವರ್ತಿಸಲು ಸರ್ಕಾರವು